ನಸುನಗೆ

# ನಗು

## ಇನ್ನು ಗ್ಯಾರಂಟಿ...




**ಸಮಕಾಲೀನ ವಿದ್ಯಮಾನಗಳೇ ಮೈದಳೆದಂತೆ ಕಾಣುವ ಅಂಕುಡೊಂಕು ರೇಖೆಗಳು, ಮೋರೆಯಲ್ಲಿ ಮಂದಹಾಸ ಮೂಡಿಸುವುದರ ಜೊತೆಗೆ ವಿಚಾರ ಪ್ರಚೋದನೆಗೂ ಇಂಬು ನೀಡುವಂತಿವೆ.**




ಇದು ಗ್ಯಾರಂಟಿಗಳ ಕಾಲ. ಸಮಾಜದ ವಿವಿಧ ವರ್ಗಗಳಿಗೆ ಸವಲತ್ತುಗಳನ್ನು ಕಲ್ಪಿಸಲು ಒಂದು ಪಕ್ಷ 'ಗ್ಯಾರಂಟಿ'ಗಳನ್ನು ಘೋಷಿಸುತ್ತದೆ. ಮತ್ತೊಂದು ಪಕ್ಷ ಆ ಗ್ಯಾರಂಟಿಗಳನ್ನು ಟೀಕಿಸುತ್ತಲೇ, ಬೇರೊಂದು ಹೆಸರಿನಲ್ಲಿ ಗ್ಯಾರಂಟಿಗಳನ್ನು ಪ್ರಕಟಿಸುತ್ತದೆ. ಗ್ಯಾರಂಟಿ ಯಾರಿಗೆ ಬೇಡ?

ಕನ್ನಡದ ಸುಪ್ರಸಿದ್ಧ ವ್ಯಂಗ್ಯಚಿತ್ರಕಾರರೂ 'ಗ್ಯಾರಂಟಿ'ಗಳ ಬೆನ್ನುಬಿದ್ದಿದ್ದಾರೆ. ಇವರು ಖಾತರಿ ಕೊಡುತ್ತಿರುವುದು ನಗುವಿನ ಬಗ್ಗೆ. 'ಬನ್ನಿ, ನಮ್ಮ ವ್ಯಂಗ್ಯಚಿತ್ರಗಳನ್ನು ನೋಡಿ' ಎಂದು ಆಹ್ವಾನಿಸುತ್ತ ನಗುವಿನ ಗ್ಯಾರಂಟಿ ನೀಡುತ್ತಿದ್ದಾರೆ.

'ನಗೆ–ಗ್ಯಾರಂಟಿ'ಯ ಹಿಂದಿರುವುದು – ಗುಜ್ಜಾರ್, ನಂಜುಂಡಸ್ವಾಮಿ, ನಾಗನಾಥ್, ರಘುಪತಿ, ದತ್ತಾತ್ರಿ ಹಾಗೂ ಚಂದ್ರ ಗಂಗೊಳ್ಳಿ ಅವರಂಥ ಹಿರಿಯ ಹಾಗೂ ಕಸುಬುದಾರ ಕಾರ್ಟೂನಿಸ್ಟರು. ಇವರುಗಳ ಆಯ್ದ ವ್ಯಂಗ್ಯಚಿತ್ರಗಳ ಪ್ರದರ್ಶನ 'ನಗೆ–ಗ್ಯಾರಂಟಿ' ಹೆಸರಿನಲ್ಲಿ ನಡೆಯುತ್ತಿದೆ; ಬೆಂಗಳೂರಿನ ಬಸವನಗುಡಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಗ್ಯಾಲರಿಯಲ್ಲಿ, ಫೆಬ್ರುವರಿ 3ರಿಂದ 13ರವರೆಗೆ.

ಇಲ್ಲಿನ ಅಂಕುಡೊಂಕು ರೇಖೆಗಳಲ್ಲಿ ಹುದುಗಿರುವ ನಗುವಿಗೆ ಎಷ್ಟೊಂದು ಮುಖ? ಪ್ರಶಸ್ತಿಗಳ ಹಾವಳಿ, ಧರ್ಮದ ಪ್ರಭಾವಳಿ, ರಾಜಕೀಯದ ವಿನೋದಾವಳಿ – ಹೀಗೆ, ಸಮಕಾಲೀನ ವಿದ್ಯಮಾನಗಳೇ ಕಾರ್ಟೂನ್‌ಗಳಾಗಿವೆ. ರೀಲ್ಸ್‌ನಿಂದ ಕೃತಕ ಬುದ್ಧಿಮತ್ತೆಯವರೆಗಿನ ಹರಹು ಈ ವ್ಯಂಗ್ಯಚಿತ್ರಗಳಿಗಿದೆ.

ನಗುವಿನ ಗ್ಯಾರಂಟಿ ನೀಡುತ್ತಿದ್ದರೂ, ನಗಿಸುವುದಷ್ಟೇ ಪ್ರದರ್ಶನದಲ್ಲಿನ ಕಾರ್ಟೂನ್‌ಗಳ ಉದ್ದೇಶವಿಲ್ಲ. ನಗುನಗುತ್ತಲೇ ಸಮಾಜದಲ್ಲಿನ ಲೋಪದೋಷಗಳತ್ತ ಸಹೃದಯರ ಗಮನಸೆಳೆಯುವುದು, ಸಾಮಾಜಿಕ ವಿಶ್ಲೇಷಣೆಯೊಂದಿಗೆ ಆತ್ಮವಿಮರ್ಶೆಗೂ ಒತ್ತಾಯಿಸುವುದು ಈ ಚಿತ್ರಗಳ ಉದ್ದೇಶ. ಕಲೆಯ ಮೂಲ ಸೂತ್ರಗಳಾದ ಮನರಂಜನೆ ಹಾಗೂ ಮನೋವಿಕಾಸದ ಸಾಧ್ಯತೆಗಳೆರಡೂ 'ನಗೆ ಗ್ಯಾರಂಟಿ'ಯಲ್ಲಿ ಸಾಕಾರಗೊಂಡಿವೆ.

ಪ್ರತಿಕ್ರಿಯಿಸಿ: **feedback@sudha.co.in**

